Brohat Bengaluru Mahanagara Palike

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು/ಸಹಾಯಕ ಅಭಿಯಂತರರ ಕಛೇರಿ ನಾಗಪುರ ಉಪವಿಭಾಗ, ಬಿ.ಬಿ.ಎಂ.ಪಿ.,

12ನೇ ಮುಖ್ಯರಸ್ತೆ, 11ನೇ ಕ್ರಾಸ್, ನಾಗಪುರ, ಬಿಬಿಎಂಪಿ ಕಛೇರಿ ಸಂಕೀರ್ಣ ಕಟ್ಟಡ, ಮಹಾಲಕ್ಷ್ಮೀಲೇಔಟ್,ಬೆಂಗಳೂರು-86,

# ದಿನಾಂಕ:-05-06-2021ರಂದು ನಡೆದ ವಾರ್ಡ್ ಸಂಖ್ಯೆ:67ರ ವಾರ್ಡ್ ಸಮಿತಿ ಸಭೆಯ ನಡವಳಿ

ಉಲ್ಲೇಖ:- (1) ಸಮಿತಿ ಸಭೆ ಸೂಚಿ ಪತ್ರ ಸಂಖ್ಯ :ಬಿ12(5)/ಪಿಆರ್/35/2020-21 ದಿನಾಂಕ:21:09:2020

(2)ಸಭೆ ಸೂಚನಾ ಪತ್ರ ಸಂ. ಸ.ಅ./ವಾ-67/ಪಿ.ಆರ್./21/2020-21 ದಿನಾಂಕ: 02-06-2021

| ಕ್ರ.ಸ. | ಶ್ರೀಯುತರ ಹೆಸರು | ಹುದ್ದೆ |
|---|---|---|
| 1. | ಶ್ರೀ. ವಿಶ್ವನಾಥ್ | ಮುಖ್ಯ ಅಭಿಯಂತರರು (ಘ.ತ್ಯಾ.ನಿ) ಬಿಬಿಎಂಪಿ ನೋಡೆಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್ ಸಂಖ್ಯೆ:67 |
| 2. | ಶ್ರೀ ಬಿ.ಸಿ ರವಿಕುಮಾರ್ | ಸಹಾಯಕ ಅಭಿಯಂತರರು ವಾರ್ಡ್-67 ಹಾಗು ಸಮಿತಿ ಕಾರ್ಯದರ್ಶಿಗಳು |
| 3. | ಶ್ರೀ ಆಕಾಶ್ | ವಾರ್ಡ್ ಸಮಿತಿ ಸದಸ್ಯರು |
| 4. | ಶ್ರೀ ಕೆ ಗಂಗಹನುಮಯ್ಯ | ವಾರ್ಡ್ ಸಮಿತಿ ಸದಸ್ಯರು |
| 5. | ಶ್ರೀ ಉದಯ ಶಂಕರ್ | 1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ |
| 6. | ಶ್ರೀಮತಿ ಜಿ. ಶೃತಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್-67 |
| 7. | ಶ್ರೀ ಗೋಪಾಲ್ ಕೃಷ್ಣ | ಸಂಚಾರಿ ಪೋಲಿಸ್ ಕಾನ್ಸಟೆಬಲ್, ರಾಜಾಜಿನಗರ ಪೋಲೀಸ್ ಠಾಣೆ |
| 8. | ಶ್ರೀ. ರಾಜಗೋಪಾಲ್ | ಟ್ಯಾಕ್ಸ್ ಇನ್ಸ್‌ಪೆಕ್ಟರ್, ನಾಗಪುರ ವಾರ್ಡ್-67 |
| 9. | ಶ್ರೀ.ಶಿವಕುಮಾರ್ | ಸಹಾಯಕ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಮಹಾಲಕ್ಷ್ಮೀಲೇಔಟ್ ಪೋಲಿಸ್ ಠಾಣೆ |
| 10. | ಶ್ರೀ. ಎನ್ ಮಂಜುನಾಥ್ | ತೋಟಗಾರಿಕೆ ಇಲಾಖೆ |
| 11. | ಶ್ರೀ. ಎಲ್ ಸತೀಶ್ | ಬೀದಿ ದೀಪ ಗುತ್ತಿಗೆದಾರರ ಸಿಬ್ಬಂದಿ |
| 12. | ಶ್ರೀ. ಗಂಗಚೆಲುವಯ್ಯ | ಬೆಂ.ಜ.ಮಂ |
| 13. | ಶ್ರೀ. ಆನಂದಮೂರ್ತಿ | ಸಹಾಯಕ ಅಭಿಯಂತರರು, 'ಎನ್1 ಉಪವಿಭಾಗ' ಬೆಸ್ಕಂ |



ಪು.ತಿ.ನೋ.

5/6/2021

Scanned by CamScanner

| | | |
|---|---|---|
| 14. | ಶ್ರೀ. ಅಶ್ವತ್ | ಹೆಡ್ ಕಾನ್ಸಟೆಬಲ್, ಸುಬ್ರಹ್ಮಣ್ಯನಗರ ಪೊಲೀಸ್ ಠಾಣೆ |
| 15. | ಶ್ರೀ. ವಿಶಾಲ್ | ವಾರ್ಡ್ ಮಾರ್ಷಲ್, ವಾರ್ಡ್-67 |
| 16. | ಶ್ರೀ. ಮಂಜು | ಸಹಾಯಕ ಪೋಲಿಸ್ ಸಬ್ ಇನ್ಸ್ಪೆಕ್ಟರ್ ರಾಜಾಜಿನಗರ ಪೊಲೀಸ್ ಠಾಣೆ |
| 17. | ಶ್ರೀ. ಮೂರ್ತಿ | ಅರಣ್ಯ ಇಲಾಖೆ. |
| 18. | ಶ್ರೀ.ಮಲ್ಲಯ್ಯ | ಅರಣ್ಯ ಇಲಾಖೆ. |

ವಾರ್ಡ್ ಸಮಿತಿ ಸಭೆಯ ಕಾರ್ಯದರ್ಶಿಗಳು ಮಾತನಾಡಿ ಜೂನ್ ಮಾಹೆಯ ಮೊದಲನೆ ಶನಿವಾರ ದಿ:05/06/2021ರಂದು ಬೆಳಿಗ್ಗೆ 9.30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಅಭಿವೃದ್ಧಿ ಹಾಗೂ ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕರೆದಿರುವ ಸಭೆಗೆ ಆಗಮಿಸಿರುವ ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮತ್ತು ಸಮಿತಿ ಸದಸ್ಯರಿಗೆ ಸ್ವಾಗತ ಕೋರಿದರು. ಹಾಗೂ ವಾರ್ಡ್ ಸಂಖ್ಯೆ:67ರ ವಾಸ್ತವದ ಬಗ್ಗೆ ಕಿರು ಪರಿಚಯವನ್ನು ಸಭೆಗೆ ಮಂಡಿಸಿದರು.

ಮಾನ್ಯ ವಾರ್ಡ್ ಸಮಿತಿ ಅಧ್ಯಕ್ಷರು, ಮಾತನಾಡಿ ಸಮಿತಿಯ ಸದಸ್ಯರು ಮತ್ತು ಸ್ಥಳೀಯ ಸಾರ್ವಜನಿಕರು ತಮ್ಮ ತಮ್ಮ ಅವಹಾಲುಗಳನ್ನು ತಿಳಿಸಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಸಮಿತಿಯ ಸದಸ್ಯರು ಈ ಕೆಳಕಂಡಂತೆ ವಾರ್ಡ್‌ನಲ್ಲಿ ಕಂಡುಬಂದಿರುವ ಸಮಸ್ಯೆಗಳನ್ನು ಸಭೆಗೆ ಮಂಡಿಸಿದರು.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

| | |
|---|---|
| ಶ್ರೀ ಕೆ ಗಂಗಹನುಮಯ್ಯ **ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನ ಉಷಾ ಉದ್ಯಾನದ ಹತ್ತಿರ ಡೆಬ್ರೀಸ್ ಹಾಗು ಕಸ ಹಾಕುತ್ತಿದ್ದಾರೆ ಇದರಿಂದ ದಿನನಿತ್ಯಾ ವಾಕಿಂಗ್ ಮಾಡುವವರಿಗೆ ಹಾಗು ಪಾದಚಾರಿಗಳಿಗೆ ತೊಂದರೆ ಉಂಟಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ವಾರ್ಡ್ ಮಾರ್ಷಲ್ ಕಸ ಹಾಗು ಡೆಬ್ರೀಸ್ ಹಾಕುತ್ತಿರುವವರಿಗೆ ದಂಡ ಹಾಕಬೇಕು ಮತ್ತು ಸಹಾಯಕ ಅಭಿಯಂತರರು ಹಾಗು ಕಿರಿಯ ಆರೋಗ್ಯ ಪರಿವೀಕ್ಷಕರು ಅವುಗಳನ್ನು ತೆರವುಗೊಳಿಸಲು ಸೂಚಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್-67 | ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿರುವಂತೆ ವಾರ್ಡ್‌ನ ಉಷಾ ಉದ್ಯಾನ ಹಾಗು ಸುತ್ತ ಮುತ್ತಲು ಡೆಬ್ರೀಸ್ ಅನ್ನು ತೆರವುಗೊಳಿಸುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀಮತಿ ಜಿ. ಶೃತಿ ಕಿರಿಯ ಆರೋಗ್ಯ ಪರಿವೀಕ್ಷಕರು | ವಾರ್ಡ್ ಸಮಿತಿ ಅಧ್ಯಕ್ಷರು ಸೂಚಿಸಿರುವಂತೆ ವಾರ್ಡ್‌ನ ಉಷಾ ಉದ್ಯಾನ ಹಾಗು ಸುತ್ತ ಮುತ್ತಲು ಕಸವನ್ನು ತೆರವುಗೊಳಿಸುವುದಾಗಿ ಸಭೆಗೆ ಭರವಸೆ ನೀಡಿದರು. |
| ಶ್ರೀ ಆಕಾಶ್ **ವಾರ್ಡ್ ಸಮಿತಿ ಸದಸ್ಯರು** | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್ 19ನೇ 'ಎಚ್' ಮೈನ್‌ನಲ್ಲಿ ವಾಹನ ಪಾರ್ಕಿಂಗ್ ಸಮಸ್ಯೆ ಮತ್ತು ಪಾರ್ಕಿಂಗ್ ಮಾಡಿದ ಜಾಗಗಳಲ್ಲಿ ಅನೈತಿಕ(ಕಾನೂನುಬಾಹಿರ) ಚಟುವಟಿಕೆಗಳು ನಡೆಯುತ್ತಿರುತದೆ ಇದರಿಂದ ಅಕ್ಕ ಪಕ್ಕ ಮನೆಗಳಿಗೆ ಬಾರಿ ತೊಂದರೆ ಉಂಟಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |



[signature] 5/6/2021 ಮು.ತಿ.ನೋ.

Scanned by CamScanner

ವಾರ್ಡ್ 67ರ ವಾರ್ಡ್ ಸಮಿತಿ ಸಭೆ ನಡವಳಿಗಳು

| | |
|---|---|
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ಪೋಲಿಸ್ ಇಲಾಖೆಯವರು ಕ್ರಮವಹಿಸಲು ಸೂಚಿಸಿದರು. |
| ಶ್ರೀ. ಅಶ್ವತ್ ಹೆಡ್ ಕಾನ್ಸಟೆಬಲ್, ಸುಬ್ರಹ್ಮಣ್ಯನಗರ ಪೊಲೀಸ್ ಠಾಣೆ | ವಾರ್ಡ್ ಸಮಿತಿ ಸದಸ್ಯರ ದೂರಿಗೆ ಸಂಭಂದಿಸಿದಂತೆ ರಾಜಾಜಿನಗರ 1ನೇ ಬ್ಲಾಕ್ 19ನೇ 'ಎಚ್' ಮೈನ್‌ನಲ್ಲಿ ಬಿಟ್ ಪೋಲಿಸ್‌ರವರಿಗೆ ತಿಳಿಸಿ ಹೆಚ್ಚು ಬಿಟ್‌ಗಳನ್ನು ಹಾಕಲು ತಿಳಿಸುತ್ತೆವೆ, ಹಾಗು ವಾಹನ ನಿಲುಗಡೆ ತೆರವುಗೊಳಿಸಲು ಮಲ್ಲೇಶ್ವರಂ ಸಂಚಾರಿ ಪೋಲಿಸ್‌ರವರಿಗೆ ತಿಳಿಸಲು ಸೂಚಿಸಿದರು. |
| ಶ್ರೀ.ಶಿವಕುಮಾರ್ ಸಹಾಯಕ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಮಹಾಲಕ್ಷ್ಮೀಲೇಔಟ್ ಪೋಲಿಸ್ ಠಾಣೆ | ಮಳೆಗಾಲ ಶುರುವಾಗುತ್ತಿರುವುದರಿಂದ ರಸ್ತೆಗಳಲ್ಲಿನ ಗುಂಡಿಗಳು ಹಾಗು ಎಲ್ಲಾ ರಸ್ತೆಗಳಲ್ಲಿನ ಶೌಲ್ಡರ್ ಡ್ರೈನ್‌ಗಳನ್ನು ಸ್ವಚ್ಛಗೊಳಿಸುವುದರಿಂದ ಮಳೆ ನೀರು ಸರಾಗವಾಗಿ ಡ್ರೈನ್‌ಗೆ ಹರಿಯುವುದು ಇದರಿಂದ ವಾಹನ ಅವಘಡ ತಡೆಯಬಹುದು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್–67 | ವಾರ್ಡ್‌ನ ಸಹಾಯಕ ಅಭಿಯಂತರರು ಮಾತನಾಡುತ್ತ ವಾರ್ಡ್‌ನಲ್ಲಿ ಪ್ರತಿನಿತ್ಯ ಗ್ಯಾಂಗ್ ಮ್ಯಾನ್‌ಗಳನ್ನು ಹಾಗು ಸೀಲ್ಟ್ ಆಂಡ್ ಟ್ರಾಕ್ಟರ್ ಗುತ್ತಿಗೆದಾರರ ಸಿಬ್ಬಂಧಿಗಳನ್ನು ಬಳಸಿಕೊಂಡು ವಾರ್ಡ್‌ನ ಎಲ್ಲಾ ರಸ್ತೆಗಳಲ್ಲಿನ ಶೌಲ್ಡರ್‌ಗಳನ್ನು ಹಾಗು ಸಿಲ್ಟ್ ಅನ್ನು ಪ್ರತಿ ನಿತ್ಯಾ ತೆರವುಗೊಳಿಸಲಾಗುತಿರುವುದು ಹಾಗು ದೂರುಗಳಿದ್ದಲ್ಲಿ ಕೂಡಲೇ ಆ ದೂರುಗಳನ್ನು ಅಟೆಂಡ್ ಮಾಡಲಾಗುವುದು ಸಭೆಗೆ ಮಾಹಿತಿ ಒದಗಿಸಿದರು. |
| ಶ್ರೀ ಗೋಪಾಲ್ ಕೃಷ್ಣ ಸಂಚಾರಿ ಪೋಲಿಸ್ ಕಾನ್ಸಟೆಬಲ್ | ವಾರ್ಡ್‌ನ ನಾಗಪುರ 11ನೇ ಕ್ರಾಸ್ ಆರ್ಚ್ ಹತ್ತಿರ ಕಲ್ವಟ್‌ನ ಕಲ್ಲು ಚಪ್ಪಡಿ ಒಡೆದು ಹೋಗಿದೆ ಇದರಿಂದ ವಾಹನ ತಿರುವಿಗೆ ಸಮಸ್ಯೆ ಉಂಟಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ ಬಿ.ಸಿ ರವಿಕುಮಾರ್ ಸಹಾಯಕ ಅಭಿಯಂತರರು ವಾರ್ಡ್–67 | ವಾರ್ಡ್‌ನ ಸಂಚಾರಿ ಪೋಲಿಸ್ ಕಾನ್ಸಟೆಬಲ್‌ರವರ ದೂರಿಗೆ ಸಂಭಂದಿಸಿದಂತೆ ಹೊಸ ಕಲ್ಲು ಚಪ್ಪಡಿಯನ್ನು ಹಾಕುವ ಕೆಲಸವನ್ನು ಶೀಘ್ರವೆ ಪ್ರಾರಂಭಿಸುವುದಾಗಿ ಸಭೆಗೆ ಬರವಸೆ ನೀಡಿದರು |
| ಶ್ರೀ.ವಿಶ್ವನಾಥ್ ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕೋವಿಡ್–19ರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು. |
| ಉದಯ ಶಂಕರ್ **1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ** | ವಾರ್ಡ್‌ನ ರಾಜಾಜಿನಗರ 'ಆರ್' ಬ್ಲಾಕ್‌ನಲ್ಲಿ 18 ಹಾಗು 45ವರ್ಷ ಮೇಲ್ಪಟ ಸಾರ್ವಜನಿಕರಿಗೆ ಲಸಿಕೆ ನೀಡುವ ಕ್ಯಾಂಪ್ ನೆಡಿಯಿತು ಇದರಿಂದ ರಾಜಾಜಿನಗರ 'ಆರ್' ಬ್ಲಾಕ್‌ನ ಜನರಿಗೆ ಬಹಳ ಅನುಕುಲವಾಯಿತು ಎಂದು ಸಭೆಗೆ ತಿಳಿಸಿದರು. |
| ಉದಯ ಶಂಕರ್ **1ನೇ ಆರ್ ಬ್ಲಾಕ್ ನಿವಾಸಿಗಳ ಕ್ಷೇಮಾಭಿವೃಧಿ ಸಂಘ** | ವಾರ್ಡ್‌ನ ರಾಜಾಜಿನಗರ 'ಆರ್' ಬ್ಲಾಕ್‌ನಲ್ಲಿ ರಂಬೆಗಳನ್ನು ಟ್ರಿಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಗುರುಮೂರ್ತಿ ಆರೋಗ್ಯ ಇಲಾಖೆ ಮೇಲ್ವಿಚಾರಕರು | ವಾರ್ಡ್‌ನ ರಾಜಾಜಿನಗರ ಇಂಡಿಯನ್ ಬ್ಯಾಂಕ್ ಹತ್ತಿರ ರಂಬೆಗಳನ್ನು ಟ್ರಿಮಿಂಗ್ ಮಾಡಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ಮಲ್ಲಯ್ಯ ಅರಣ್ಯ ಇಲಾಖೆ ಸಿಬ್ಬಂದಿ | ವಾರ್ಡ್ ಸಮಿತಿ ಹಾಗು ಆರೋಗ್ಯ ಮೇಲ್ವಿಚಾರಕರ ದೂರಿಗೆ ಸಂಭಂದಿಸಿದಂತೆ ರಂಬೆಗಳ ಟ್ರಿಮಿಂಗ್ ಮಾಡುವುದಾಗಿ ಸಭೆಗೆ ಬರವಸೆ ನೀಡಿದರು. |

ಮು.ತಿ.ನೋ



[signature] 4/6/2021

Scanned by CamScanner

ವಾರ್ಡ್ 67 ಸಮಿತಿ ಸಭೆ ದಿನಾಂಕ 05/6/2021

| | |
|---|---|
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ಭೋವಿಪಾಳ್ಯಾದಲ್ಲಿ ಗಂಗಹನುಮಯ್ಯರವರು ತಿಳಿಸಿರುವಂತೆ ಬೀದಿ ದೀಪದ ಸಮಸ್ಯ ಇವರೆಗು ಸರಿಪಡಿಸಿರುವುದಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಎಲ್ ಸತೀಶ್<br>ಬೀದಿ ದೀಪ ಗುತ್ತಿಗೆದಾರರ ಸಿಬ್ಬಂದಿ | ವಾರ್ಡ್ ಸಮಿತಿ ಅಧ್ಯಕ್ಷರ ದೂರಿಗೆ ಸಂಭಂದಿಸಿದಂತೆ ಭೋವಿಪಾಳ್ಯ ಬೀದಿ ದೀಪ ಸಮಸ್ಯೆ ಸರಿಪಡಿಸಿರುವುದಾಗಿ ಸಭೆಗೆ ಹಾಗು ಸಮಿತಿ ಅಧ್ಯಕ್ಷರಿಗೆ ಮಾಹಿತಿ ಒದಗಿಸಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ 18 ವರ್ಷ ಹಾಗು 45ವರ್ಷ ಮೇಲ್ಪಟವರಿಗೆ ಲಸಿಕೆ ನೀಡಲಾಗುತ್ತಿದ್ದು ಎಲ್ಲಾ ಫ್ರಂಟ್ ಲೈನ್ ವಾರಿಯರ್ರ್‌ಸ್‌ಗಳು ಹಾಗು ಕೋವಿಡ್ ಸ್ವಯಂ ಸೇವಕರು ಹಾಗು 45ವರ್ಷ ಮೇಲ್ಪಟ ಎಲ್ಲಾ ಸಾರ್ವಜನಿಕರಿಗೆ ಕೋವಿಡ್-19 ರೋಗ ತಡೆಗಟಲು ಲಸಿಕೆ ತೆಗೆದುಕೊಳಲು ಸಭೆಯಲ್ಲಿ ತಿಳಿಸಿದರು. |
| ಶ್ರೀಮತಿ ಜಿ. ಶೃತಿ<br>ಕಿರಿಯ ಆರೋಗ್ಯ ಪರಿವೀಕ್ಷಕರು | ವಾರ್ಡ್‌ನ ಚೈತನ್ಯ ಶಾಲೆ ಹಿಂಭಾಗ ಘ.ತ್ಯಾ.ನಿ ಜಾಗದಲ್ಲಿ ಘ.ತ್ಯಾ.ನಿಗೆ ಸಂಭಂದಿಸಿದ ವಸ್ತುಗಳು ಕಳತನವಾಗುತ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಶ್ರೀ.ಶಿವಕುಮಾರ್<br>ಸಹಾಯಕ ಪೋಲಿಸ್ ಸಬ್ ಇನ್ಸ್‌ಪೆಕ್ಟರ್<br>ಮಹಾಲಕ್ಷ್ಮೀಲೇಔಟ್ ಪೋಲಿಸ್ ಠಾಣೆ | ಸಭೆಯಲ್ಲಿ ಹಾಜರಿದ್ದ ಸಹಾಯಕ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಮಾತನಾಡುತ್ತ ಚೈತನ್ಯ ಶಾಲೆ ಹಿಂಭಾಗ ಘ.ತ್ಯಾ.ನಿ ಜಾಗದಲ್ಲಿ ಘ.ತ್ಯಾ.ನಿಗೆ ಸಂಭಂದಿಸಿದ ವಸ್ತುಗಳು ಕಳತನ ಬಗ್ಗೆ ಒಂದು ಪತ್ರದ ಮುಖೇನ ದೂರು ಕೊಡಲು ತಿಳಿಸಿದರು ಮತ್ತು ಈ ದೂರಿನ ಬಗ್ಗೆ ಕ್ರಮವಹಿಸುವುದಾಗಿ ತಿಳಿಸಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನ ರಾಜಾಜಿನಗರ 1ನೇ ಬ್ಲಾಕ್ ಅನನ್ಯ ಆಸ್ಪತ್ರೆಯ ಹತ್ತಿರ ಟ್ರಾನ್ಸ್‌ಫಾರ್ಮರ್‌ಗಳ ಫೆಂಸಿಂಗ್ ಕಿತ್ತು ಹೋಗಿರುವುದು ಕಂಡುಬಂದಿರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. |
| ಆನಂದಮೂರ್ತಿ<br>ಸಹಾಯಕ ಅಭಿಯಂತರರು, ಬೆಸ್ಕಾಂ | ವಾರ್ಡ್ ಸಮಿತಿ ಅದ್ಯಕ್ಷರ ದೂರಿಗೆ ಸಂಭಂದಿಸಿದಂತೆ ಕ್ರಮವಹಿಸುವುದಾಗಿ ತಿಳಿಸಿದರು. |
| ಶ್ರೀ. ಮಂಜು<br>ಸಹಾಯಕ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ | ಸ್ವಂತ ಬಳಕೆ ಮಾಡುವ ವಾಹನಗಳ ನಂಬರ್ ಪ್ಲೇಟ್ ಮೇಲೆ ಬಿ.ಬಿ.ಎಂ.ಪಿ ಅಥವ ಬೇರೆ ಇಲಾಖೆಗಳ ಹೆಸರು ಬಳಕೆ ಮಾಡಿ ಚಾಲನೆ ಮಾಡುವುದು ಕಾನುನು ಬಾಹಿವಾಗಿರುತ್ತದೆ, ಈ ರೀತಿಯ ನಂಬರ್ ಪ್ಲೇಟ್ ಬಳಕೆ ಮಾಡಿ ಚಾಲನೆ ಮಾಡುವವರಿಗೆ ದಂಡ ವಿದಿಸಲಾಗುತ್ತದೆ ಹಾಗು ಅವರ ಮೇಲೆ ಕೇಸ್ ಹಾಕಲಾಗುತ್ತದೆ ಎಂದು ಸಭೆಗೆ ಮಾಹಿತಿ ಒದಗಿಸಿದರು. |
| ಶ್ರೀ.ವಿಶ್ವನಾಥ್<br>ನೋಡೆಲ್ ಅಧಿಕಾರಿಗಳು | ವಾರ್ಡ್‌ನಲ್ಲಿ ಕೋವಿಡ್-19 ಪ್ರಕರಣಗಳ ವಿವರಗಳನ್ನು ಪಡೆದರು ಮತ್ತು ಸಭೆಗೆ ಮಾಹಿತಿ ಒದಗಿಸಿದರು. |

[signature] 5/6



ಮು.ತಿ.ನೋ.

Scanned by CamScanner

ದಿನಾಂಕ 05/06/2021 [illegible]

ಪ್ರತಿಯನ್ನು

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು (ಮಹಾಲಕ್ಷ್ಮೀಪುರಂ) ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

[illegible]

[illegible] 05/06/21
ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು, ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

[illegible] 05/06/2021
ಅಧ್ಯಕ್ಷರು ಹಾಗೂ
ನೋಡಲ್ ಅಧಿಕಾರಿಗಳು ವಾರ್ಡ್– 67
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ಮು.ಪ್ರ.ನೋ.

Scanned by CamScanner